# ಪುಸ್ತಕ ಪರಿಚಯ



**The Light Divine :**
**Life and Philosophy of Ramakrishna**
ಲೇಖಕರು : ಸ್ವಾಮಿ ಹರ್ಷಾನಂದ
ಪ್ರಕಾಶಕರು: ಶ್ರೀರಾಮಕೃಷ್ಣ ಮಠ
ಬೆಂಗಳೂರು - 560 019
ಪ್ರಕಟನಾ ವರ್ಷ : 2001 ಪುಟಗಳು : vii +105,
ಪುಸ್ತಕದ ಬೆಲೆ: ರೂ. 5/- (Subsidized edition)

**ಸುಮಾರು** ೧೦೦ ಪುಟಗಳ ಒಂದು ಪುಟ್ಟ, ವಿಶಿಷ್ಟ ಪುಸ್ತಕ ಇದು. ಇದರಲ್ಲಿ ಪರಮಹಂಸ ಪ್ರಪಂಚವನ್ನೆಲ್ಲ ಲೇಖಕರು ಸಂಕ್ಷಿಪ್ತವಾಗಿ ಪರಿಚಯಿಸಿದ್ದಾರೆ. ಅಂಗೈಯಲ್ಲಿ ಆಕಾಶ ತೋರಿಸುವ ಒಂದು ಸಫಲ ಪ್ರಯತ್ನ ಇಲ್ಲಿದೆ. ಇದು *Light Divine* ಮಾತ್ರವಲ್ಲ, *Life Divine* ಕೂಡ!

ಮೊದಲು, ವಿಸ್ಮಯಾವಹ ಸಾಧನೆ, ಸಿದ್ಧಿಗಳಿಂದೊಡಗೂಡಿದ ಶ್ರೀರಾಮಕೃಷ್ಣರ ಜೀವನಕಥೆಯನ್ನು ಲೇಖಕರು ಸಂಗ್ರಹವಾಗಿ ನಿರೂಪಿಸಿದ್ದಾರೆ. ಅನಂತರ, ಅದಕ್ಕೇ ಅಂಟಿದಂತೆ 'ಸುಗಂಧ ದೀಪ'ಗಳಾದ ರಾಮಕೃಷ್ಣರ ಪ್ರಮುಖ ಶಿಷ್ಯರ ಕಿರುಪರಿಚಯ ಬಂದಿದೆ. ಕಡೆಯಲ್ಲಿ ಎರಡು ಅನುಬಂಧಗಳಾಗಿ ಅವರ ಪುರುಷ ಭಕ್ತರ ಮತ್ತು ಸ್ತ್ರೀ ಭಕ್ತೆಯರ ಚಿತ್ರಗಳು ಅಡಕವಾಗಿ ಮೂಡಿವೆ. ನಡುವೆ ರಾಮಕೃಷ್ಣರ 'ದರ್ಶನ'(Philosophy) ಅನಾವರಣಗೊಂಡಿದೆ. ವಾಸ್ತವವಾಗಿ, ರಾಮಕೃಷ್ಣರು ತಮ್ಮದೇ ಆದ 'ದರ್ಶನ' ವೆಂದು ಏನನ್ನೂ ಪ್ರತಿಪಾದಿಸಲಿಲ್ಲ; ಅವರ ಮಾತುಕತೆಗಳ ನಡುನಡುವೆ ಅಲ್ಲಲ್ಲಿ ಸುಳಿಯುವ ತತ್ಸಂಬಂಧವಾದ ವಿಚಾರಗಳನ್ನು ಹೆಕ್ಕಿ ಕ್ರೋಢೀಕರಿಸಿ, ಅವರ 'ದರ್ಶನ'ವನ್ನು ರೂಪಿಸಬೇಕು. ಸ್ವಾಮಿ ಹರ್ಷಾನಂದರು ಮಾಡಿರುವುದು ಅದೇ ಕೆಲಸವನ್ನು. ಅವರ ಸೂಕ್ಷ್ಮವೂ, ವ್ಯಾಪಕವೂ ಆದ ಅಧ್ಯಯನ ಇಲ್ಲಿ ಹರಳುಗೊಂಡಿದೆ. ಅದರಿಂದಾಗಿ ನೂತನ ಪ್ರಾಂತವೊಂದು ತೆರೆದುಕೊಂಡಿದೆ.

ಶ್ರೀರಾಮಕೃಷ್ಣರ 'ದರ್ಶನ' ಬುದ್ಧಿಪೂರ್ವಕವಾದುದಲ್ಲ, ಸಿದ್ಧಿಪೂರ್ವಕವಾದುದು, ಅವರ ಹೇಳಿಕೆಗಳೆಲ್ಲ ಅಪರೋಕ್ಷಾನುಭೂತಿಯಿಂದ ಸ್ಫುರಿಸಿದವು ಎಂಬುದನ್ನು ನೆನಪಿಡಬೇಕು. ವಿವಿಧ ತಾತ್ತ್ವಿಕ ವಿಷಯಗಳ ಬಗೆಗೆ ರಾಮಕೃಷ್ಣರ ನಿಲುವುಗಳನ್ನು ಮುಖ್ಯವಾಗಿ ಶಂಕರಾಚಾರ್ಯರ ಅದ್ವೈತ ಸಿದ್ಧಾಂತದ ಹಿನ್ನೆಲೆಯಲ್ಲಿ ಲೇಖಕರು ಸಂಗ್ರಹಿಸಿದ್ದಾರೆ.

ಕಡೆಯದಾಗಿ ಹರ್ಷಾನಂದರು ಹೇಳುತ್ತಾರೆ: "ರಾಮಕೃಷ್ಣರ ಅನುಭವಗಳು ಮತ್ತು ಉಕ್ತಿಗಳು ಅನೇಕಾಂಶಗಳಲ್ಲಿ ಸಾಂಪ್ರದಾಯಿಕ ವೇದಾಂತಕ್ಕೆ ಸದೃಶವಾಗಿದ್ದರೂ, ಅವುಗಳಲ್ಲಿ ಇನ್ನೂ ಮಿಗಿಲಾದುದುಂಟು..." ಪುಸ್ತಕದ ಒಂದು ಸಣ್ಣ ಅರಕೆಯೆಂದರೆ, ಸ್ವಾಮಿ ವಿವೇಕಾನಂದರ ವಿಷಯವಿಲ್ಲದಿರುವುದು. (ಅವರ ಉಲ್ಲೇಖ ಅನೇಕ ಕಡೆ ಬಂದಿದೆ.) ಅವರ ಬಗೆಗೆ ಹೆಚ್ಚಿನ ವಿವರಗಳ ಅಗತ್ಯವಿದೆ ಎಂಬುದು ಹರ್ಷಾನಂದರು ಕೊಡುವ ಕಾರಣ. ಆದರೂ ಉಳಿದವರನ್ನು ಹೇಗೋ ಹಾಗೆ ವಿವೇಕಾನಂದರನ್ನೂ ಮೂರು ನಾಲ್ಕು ಪುಟಗಳಲ್ಲಿ ಪರಿಚಯಿಸುವುದು ಸಾಧ್ಯವಿತ್ತು. (ಈ ಕೆಲಸವನ್ನು ಪುಸ್ತಕದ ಪುನರ್ಮುದ್ರಣದಲ್ಲಿ ಮಾಡಬಹುದು.) ಒಟ್ಟಿನಲ್ಲಿ, ತುಂಬ ಉಪಯುಕ್ತವಾದ ಹೊತ್ತಗೆ.

—ಡಾ. ಸಿ. ಪಿ. ಕೃಷ್ಣಕುಮಾರ್

**ಕೈಲಾಸ ಮಾನಸಸರೋವರ**
**—ಒಂದು ತೀರ್ಥ ಯಾತ್ರೆ (ವಿ.ಸಿ.ಡಿ)**
ಪ್ರಕಾಶಕರು: ಶ್ರೀರಾಮಕೃಷ್ಣ ಮಠ, ಚೆನ್ನೈ - 600 004
ಪ್ರಕಟನಾ ವರ್ಷ : 2001 ಬೆಲೆ: ರೂ.300/-

**ಕೈಲಾಸಮಾನಸಸರೋವರಗಳು** ಹಿಂದು, ಬೌದ್ಧ ಮತ್ತು ಜೈನರಿಗೆ ಅತಿ ಮುಖ್ಯ ತೀರ್ಥಕ್ಷೇತ್ರಗಳಾಗಿವೆ. ಹಿಂದೂ ಪುರಾಣಗಳ ಪ್ರಕಾರ ಕೈಲಾಸ ಪರ್ವತವು ಶಿವನ ನಿವಾಸಸ್ಥಾನ, ಮಾನಸಸರೋವರ ಜಗನ್ಮಾತೆಯಾದ ಪಾರ್ವತಿಯ ಒಂದು ರೂಪ.

ಕೈಲಾಸ ಪರ್ವತದ ಬುಡವು ಸಮುದ್ರ ಮಟ್ಟದಿಂದ ಸುಮಾರು ೧೭,೦೦೦ ಅಡಿಗಳಷ್ಟು ಎತ್ತರವಾಗಿದೆ. ಈ ಪ್ರದಕ್ಷಿಣೆಯ ಮಾರ್ಗದಲ್ಲಿ ಸುಮಾರು ೧೯,೦೦೦ ಅಡಿಗಳಷ್ಟು ಎತ್ತರದ ಕಣಿವೆ ಪ್ರದೇಶವನ್ನು ದಾಟಬೇಕಾಗುತ್ತದೆ. ಸುಮಾರು ೫ ಸಾವಿರ ಅಡಿ ಎತ್ತರದ – ಕಪ್ಪು ಬಣ್ಣದ–ಏಕಗ್ರಾನೈಟ್ ಶಿಲೆಯ ಈ ಕೈಲಾಸ ಪರ್ವತವು ಪರಮಶೀತಲವೂ ಶಾಂತವೂ ಆಗಿ ನಿಂತಿದೆ. ಇದು ಒಂದು ಬೃಹತ್ ಚತುರ್ಮುಖ ಪಿರಮಿಡ್ಡಿನ ಆಕಾರದಲ್ಲಿದೆ. ಇದರ ತುದಿ ಸದಾ ಹಿಮಾವೃತವಾಗಿದೆ.

ಕೈಲಾಸ ಪರ್ವತ ಮತ್ತು ಮಾನಸಸರೋವರಗಳ ಪ್ರದಕ್ಷಿಣೆಯ ಕಾಲದಲ್ಲಿ ದರ್ಶನವಾಗುವ ವಿಶಾಲವಾದ ನೆಲ-ಜಲ- ಪರ್ವತ-ಆಕಾಶಗಳ ಪರಮ ಅದ್ಭುತ ರೂಪ-ವರ್ಣಗಳ ದಿವ್ಯ ಸೌಂದರ್ಯದ ಅತ್ಯಂತ ಪ್ರಶಂಸನೀಯ ರೀತಿಯಲ್ಲಿರುವ ಈ ವೀಡಿಯೋ ಚಿತ್ರೀಕರಣ ಪ್ರತಿಯೊಬ್ಬರೂ ಪುನಃ ಪುನಃ ನೋಡಿ ಅಪೂರ್ವವಾದ ಆನಂದವನ್ನು ಅನುಭವಿಸುವಂತೆ ಮಾಡುತ್ತದೆ. ಸುಮಾರು ೭೫ ನಿಮಿಷಗಳಷ್ಟು ದೀರ್ಘಕಾಲದ ಈ ವಿ.ಸಿ.ಡಿ ನಮ್ಮನ್ನು ಕೈಲಾಸ-ಮಾನಸ ಸರೋವರಗಳ ದಿವ್ಯಸನ್ನಿಧಿಯಲ್ಲಿ ಧ್ಯಾನಸ್ಥರನ್ನಾಗಿಸಿ ಬಿಡುತ್ತದೆ.

ಪೌರಾಣಿಕ, ಧಾರ್ಮಿಕ, ಆಧ್ಯಾತ್ಮಿಕ ದೃಷ್ಟಿಯಿಂದ ನೋಡುವವರಿಗೆ ಮಾತ್ರವಲ್ಲದೆ ಭೂಗರ್ಭ ಮತ್ತು ಭೌಗೋಲಿಕ ಅಧ್ಯಯನ ದೃಷ್ಟಿಯಿಂದ ಹಾಗೂ ಹವ್ಯಾಸಿ ಪ್ರಕೃತಿ ಛಾಯಾಚಿತ್ರ, ಚಿತ್ರಕಲೆ, ಕಾವ್ಯರಚನೆ, ಸಾಹಸ ಪ್ರವಾಸಕಥನಗಳ ದೃಷ್ಟಿಗಳಿಂದ ನೋಡುವವರಿಗೂ ಈ ಕೈಲಾಸ-ಮಾನಸ ಸರೋವರ ತೀರ್ಥಯಾತ್ರೆಯ ವಿ.ಸಿ.ಡಿಯು ಬಹಳಷ್ಟು ವಿಷಯಗಳನ್ನು ತಿಳಿಸುತ್ತದೆ. ಇದನ್ನು ನೋಡುವ ಪ್ರತಿಯೊಬ್ಬರೂ "ನಾವೂ, ಈ ದಿವ್ಯವಾದ ತೀರ್ಥಯಾತ್ರೆ ಮಾಡಲೇಬೇಕು" ಎನ್ನುವಷ್ಟು ಪ್ರಭಾವವನ್ನು ಬೀರುತ್ತದೆ. ಸೂಕ್ತ ಹಿನ್ನೆಲೆವಾದ್ಯ ಮತ್ತು ಭಾವಪೂರ್ಣವಾಗಿ ಹಾಡಿದ ಶಿವಸ್ತುತಿಯ ಹಿನ್ನೆಲೆ—ಇವು ಅತ್ಯಂತ ಭಕ್ತಿಮಯ ವಾತಾವರಣವನ್ನು ಸೃಷ್ಟಿಸುತ್ತವೆ.

—ಪ್ರೊ. ಬಿ. ಕೃಷ್ಣ